# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಸಿಆರ್.37/2006-07 ದಿನಾಂಕ:25-11-2006

## -:: ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ. ಅನುದಾನ ಹಾಗೂ ನಗರಸಭಾ ನಿಧಿಯಿಂದ ನೀರು ಸರಬರಾಜು ಮತ್ತು ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಚೆಯುಳ್ಳವರು ತಮ್ಮ ಕನಿಷ್ಟ ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿದ ಜೊತೆಗೆ ನಿಗಧಿಪಡಿಸಿರುವ ಇ.ಎಂ.ಡಿ. ಹಣವನ್ನು ಡಿ.ಡಿ. ಮುಖಾಂತರ ಅಥವಾ ಕಛೇರಿಯಲ್ಲಿ ಪಾವತಿ ಮಾಡಿದ ನಗದು ರಸೀದಿಯೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ:21-12-2006ರಂದು ಸಂಜೆ 4.00ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಷರತ್ತುಗಳು ಕಛೇರಿಯ ನಾಮಫಲಕದಲ್ಲಿ ಹಾಗೂ ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಕಟಿಸಿರುವಂತೆ ಹೆಚ್ಚಿನ ಮಾಹಿಗಳು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಕೊಳ್ಳಬಹುದು.

1) ಟೆಂಡರ್ ಫಾರಂ ಅರ್ಜಿ ಸಲ್ಲಿಸುವ ದಿನಾಂಕ:04-12-2006

2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ:11-12-2006

3) ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ ದಿನಾಂಕ:21-12-2006

4) ಟೆಂಡರ್ ಫಾರಂ ಶುಲ್ಕ : 500/- (ಮಾರಾಟ ಶುಲ್ಕ ಸೇರಿ)

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಇ.ಎಂ.ಡಿ ಮೊತ್ತ | ಕಾಲಾವಧಿ |
|---|---|---|---|---|
| 1 | ಎಸ್.ಎಫ್.ಸಿ. ಅನುದಾನದಡಿ ಆಲಹಳ್ಳಿ ಸುತ್ತ ಮುತ್ತಲಿನ ಪ್ರದೇಶದಲ್ಲಿ ಒಂದು ಹೊಸದಾಗಿ ಕೊಳವೆ ಬಾವಿ ಕೊರೆಯುವುದು ಭೂಗರ್ಭ ತಜ್ಞರು ಗುರ್ತಿಸಿರುವಂತೆ | 90000.00 | 2250.00 | 30ದಿವಸ |
| 2 | ಎಸ್.ಎಫ್.ಸಿ. ಅನುದಾನದಡಿ ಆಲಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೊಸದಾಗಿ ಕೊರೆಯುವ ಕೊಳವೆ ಬಾವಿಗೆ ಸಬ್ ಮರ್ಷಿಬಲ್ ಮೋಟಾರು ಪಂಪ್ ಅಳವಡಿಸುವ ಕೆಲಸ. | 165000.00 | 4250.00 | 30ದಿವಸ |
| 3 | ಎಸ್.ಎಫ್.ಸಿ. ಅನುದಾನದಡಿ ಮತ್ತು ನಗರ ಸಭಾ ನಿಧಿಯಡಿ ಮಾದಗೊಂಡನಹಳ್ಳಿ ರಸ್ತೆ ಆಶ್ರಯ ಬಡಾವಣೆ ಕೊಳವೆ ಬಾವಿಗಳಿಂದ ಹಳೆಯ ಆಶ್ರಯ ಬಡಾವಣೆ ವಿವಿ ಟ್ಯಾಂಕ್ ವರೆಗೆ ಹೊಸದಾಗಿ ಪೈಪ್ ಲೈನ್ ಹಾಕುವ ಕೆಲಸ. | 95000.00 | 2500.00 | 30ದಿವಸ |
| 4 | ಎಸ್.ಎಫ್.ಸಿ. ಅನುದಾನದಡಿ ಪ್ರವಾಸಿ ಮಂದಿರ ಸರ್ಕಲ್ ನಿಂದ ರೈಲ್ವೆ ಸ್ಟೇಷನ್ ವರೆವಿಗೂ ಸೋಡಿಯಂ ಬೀದಿ ದೀಪಗಳನ್ನು ಅಳವಡಿಸುವ ಕೆಲಸ. | 760000.00 | 20000.00 | 45ದಿವಸ |
| 5 | ಎಸ್.ಎಫ್.ಸಿ. ಅನುದಾನದಡಿ ಶ್ರೀ ಕೊಂಗಾಡಿಯಪ್ಪ ಕಾಲೇಜು ಮುಂಭಾಗದಿಂದ ಡೈರಿ ಸರ್ಕಲ್‌ವರೆವಿಗೂ ಸೋಡಿಯಂ ಬೀದಿ ದೀಪಗಳನ್ನು ಅಳವಡಿಸುವ ಕೆಲಸ. | 640000.00 | 16000.00 | 45ದಿವಸ |
| 6 | ನೀರು ಸರಬರಾಜು ವಿಭಾಗಕ್ಕೆ ವಿವಿಧ ವ್ಯಾಸಗಳ ಸ್ಲೂಯಿಸ್ ಬೀಡುಕಬ್ಬಿಣದ ಕವಾಟಗಳನ್ನು ಸರಬರಾಜು ಮಾಡುವ ಕೆಲಸ. | -- | 20000.00 | 15ದಿವಸ |

**ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಖಾಲಿ ಟೆಂಡರ್ ಫಾರಂಗಾಗಿ ಮನವಿ ಸಲ್ಲಿಸುವಾಗ ಟೆಂಡರ್ ಫಾರಂ ಬೆಲೆ ಮತ್ತು ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಕಟ್ಟುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

2) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭ, ಪ್ರಗತಿ, ಮುಕ್ತಾಯದ ಹಂತದ ಪೋಟೋಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು,

3) ಟೆಂಡರ್ ಅನುಮೋದಿತ ಗುತ್ತಿಗೆದಾರರು ಕರಾರು ಪತ್ರ ಬರೆದುಕೊಟ್ಟ ಮೂರು ದಿನಗಳ ಒಳಗಾಗಿ ಕಾರ್ಯಾದೇಶವನ್ನು ಪಡೆಯುವುದು. ಮತ್ತು ಕಾರ್ಯಾದೇಶವನ್ನು ನೀಡಿದ ದಿನಾಂಕವೇ ಕಾಮಗಾರಿಯ ಹಸ್ತಾಂತರಿಸಿದ ದಿನಾಂಕವೆಂದು ತಿಳಿಯುವುದು.

4) ಎಸ್.ಆರ್. ದರಕ್ಕಿಂತ ಕಡಿಮೆ ದರವನ್ನು ನಮೂದಿಸುವವರು ವ್ಯತ್ಯಾಸದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಡಿ.ಡಿ.ಯನ್ನು ಪೌರಾಯುಕ್ತರವರ ಹೆಸರಿನಲ್ಲಿ ಭರ್ತಿ ಮಾಡಿದ ಟೆಂಡರ್ ಫಾರಂಗಳ ಜೊತೆ ಸಲ್ಲಿಸುವುದು.

5) ಖಾಲಿ ಅರ್ಜಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸದೇ ಇದ್ದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

6) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

7) ವಿದ್ಯುತ್ ಕಾಮಗಾರಿಗಳಿಗೆ ಟೆಂಡರ್ ದಾರರು ಕರ್ನಾಟಕ ಸರ್ಕಾರದ ಮುಖ್ಯ ಪರಿವೀಕ್ಷರಿಂದ ನೋಂದಾಯಿಸಲ್ಪಟ್ಟ ವಿದ್ಯುತ್ ಗುತ್ತಿಗೆದಾರರಾಗಿರ ಬೇಕು, ಮತ್ತು ಕನಿಷ್ಠ 2ವರ್ಷ ಅದೇ ರೀತಿ ಕೆಲಸದಲ್ಲಿ ಅನುಭವವಿರಬೇಕು.

8) ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರರು ರಿಗ್ ಹೊಂದಿರುವ ಬಗ್ಗೆ ದಾಖಲಾತಿಗಳ ಜೆರಾಕ್ಸ್ ದೃಡೀಕರತ ಪತ್ರ ಲಗತ್ತಿಸಿರಬೇಕು.

9) ಸಬ್‌ಮರ್ಷಿಬಲ್ ಮೋಟಾರ್ ಪಂಪ್ ಅಧಿಕೃತ ತಯಾರಿಕೆಯ ದಾಖಲಾತಿಗಳನ್ನು ಲಗತ್ತಿಸಬೇಕು, ಹಾಗೂ ಅಧಿಕೃತ ಸರಬರಾಜುವಿನ ಪ್ರತಿ ಲಗತ್ತಿಸಿರಬೇಕು.

10) ಸ್ಲೂಯಿಸ್ ಕವಾಟಗಳನ್ನು ಸರಬರಾಜು ಮಾಡುವಾಗ ಮ್ಯಾನುಫ್ಯಾಕ್ಚರಿಂಗ್ ಸರ್ಟಿಫಿಕೇಟ್ ನೀಡಬೇಕು.

| | | | |
|---|---|---|---|
| ಸಹಿ:– | ಸಹಿ:– | ಸಹಿ:– | ಸಹಿ:– |
| (ಶಾಂತಮ್ಮ) | (ವಿ.ರಾಜಪ್ಪ) | (ಸು.ನರಸಿಂಹಮೂರ್ತಿ) | (ಚಿಕ್ಕಣ್ಣ) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಸ್ಥಾ.ಸ.ಅಧ್ಯಕ್ಷರು, | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. |